**All India Radio: Bangalore**
**National Bulletin In Kannada**
**21.01.2026  7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**21.01.2026  7.35 am**

**<>><><*><><<>**

ಮುಖ್ಯಾಂಶಗಳು

**೧. ಕರ್ನಾಟಕಕ್ಕೆ ಇಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭೇಟಿ; ತುಮಕೂರಿನ ಡಾ.ಶಿವಕುಮಾರ ಸ್ವಾಮೀಜಿಯವರ ಸಂಸ್ಮರಣೋತ್ಸವದಲ್ಲಿ ಭಾಗಿ**

**೨. ಪ್ರಜಾಪ್ರಭುತ್ವ ಮತ್ತು ಚುನಾವಣೆ ನಿರ್ವಹಣೆ ಕುರಿತು ದೆಹಲಿಯಲ್ಲಿಂದು ಅಂತಾರಾಷ್ಟ್ರೀಯ ಸಮಾವೇಶ**

**೩. ಸ್ವಿಟ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ವಿಶ್ವ ಆರ್ಥಿಕ ವೇದಿಕೆ; ಜಾಗತಿಕ ನಾಯಕರ ಜೊತೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸಮಾಲೋಚನೆ**

**೪. ಕೃತಕ ಬುದ್ಧಿಮತ್ತೆಯ ಭವಿಷ್ಯ ಅತ್ಯಂತ ಪರಿಣಾಮಕಾರಿ ಮಾದರಿಗಳಿಂದ ರೂಪುಗೊಳ್ಳುತ್ತದೆ - ಕೇಂದ್ರ ಸಚಿವ ಅಶ್ವಿನಿ ವೈಷ್ಣವ್**

**೫. ನವದೆಹಲಿಯಲ್ಲಿ ಇಂದು ಮತ್ಸ್ಯೋದ್ಯಮ ವಲಯದ ಮಹತ್ವದ ದುಂಡು ಮೇಜಿನ ಸಭೆ; ೮೩ ಪಾಲುದಾರ ರಾಷ್ಟ್ರಗಳು ಭಾಗಿ**

**<>><><*><><<>**

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಇಂದು ಕರ್ನಾಟಕ ಪ್ರವಾಸ ಕೈಗೊಳ್ಳಲಿದ್ದಾರೆ. ತುಮಕೂರಿನಲ್ಲಿ ಡಾ.ಶಿವಕುಮಾರ ಸ್ವಾಮೀಜಿಗಳ ಏಳನೇ ವರ್ಷದ ಪುಣ್ಯ ಸಂಸ್ಮರಣೋತ್ಸೋವದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭಾಗಿಯಾಗಲಿದ್ದಾರೆ. ಇದೇ ಸಂದರ್ಭದಲ್ಲಿ ಡಾ.ಶಿವಕುಮಾರ ಶ್ರೀಗಳ ಗದ್ದುಗೆಗೆ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಗೋಸಲ ಸಿದ್ದೇಶ್ವರ ವೇದಿಕೆಯಲ್ಲಿ ನಡೆಯಲಿರುವ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವ ವಿ.ಸೋಮಣ್ಣ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಸಿದ್ಧಗಂಗಾ ಮಠದ ಬಳಿ ಬಿಗಿಬಂದೋಬಸ್ತ್ ಏರ್ಪಡಿಸಲಾಗಿದೆ.

**<>><><*><><<>**

ಭಾರತೀಯ ಚುನಾವಣಾ ಆಯೋಗ - ಇಸಿಐ ೨೦೨೬ ರ ಪ್ರಜಾಪ್ರಭುತ್ವ ಮತ್ತು ಚುನಾವಣೆಗಳ ನಿರ್ವಹಣೆ ಕುರಿತ ಭಾರತೀಯ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ. ಇಂದಿನಿಂದ ಆರಂಭವಾಗಲಿರುವ ೩ ದಿನಗಳ ಸಮ್ಮೇಳನ, ದೆಹಲಿಯ ಭಾರತ ಮಂಟಪದಲ್ಲಿ ನಡೆಯಲಿದೆ.

ಪ್ರಜಾಪ್ರಭುತ್ವ ಮತ್ತು ಚುನಾವಣಾ ನಿರ್ವಹಣಾ ಕ್ಷೇತ್ರದಲ್ಲಿ ಭಾರತ ಆಯೋಜಿಸಿರುವ ಈ ರೀತಿಯ ಅತಿದೊಡ್ಡ ಜಾಗತಿಕ ಸಮ್ಮೇಳನ ಇದಾಗಿದೆ. ಪ್ರಪಂಚದಾದ್ಯಂತದ ೭೦ಕ್ಕೂ ಅಧಿಕ ದೇಶಗಳನ್ನು ಪ್ರತಿನಿಧಿಸುವ ಸುಮಾರು ೧೦೦ ಅಂತಾರಾಷ್ಟ್ರೀಯ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಜೊತೆಗೆ ಅಂತಾರಾಷ್ಟ್ರೀಯ ಸಂಸ್ಥೆಗಳು, ಭಾರತದಲ್ಲಿನ ವಿದೇಶಿ ರಾಯಭಾರ ಕಚೇರಿಗಳು ಮತ್ತು ಚುನಾವಣಾ ಕ್ಷೇತ್ರದಲ್ಲಿ ಶೈಕ್ಷಣಿಕ ಮತ್ತು ವೃತ್ತಿಪರತೆ ಹೊಂದಿರುವ ತಜ್ಞರು ಭಾಗವಹಿಸಲಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಚುನಾವಣಾ ಆಯುಕ್ತರಾದ ಡಾ.ಸುಖಬೀರ್ ಸಿಂಗ್ ಸಂಧು ಮತ್ತು ಡಾ.ವಿವೇಕ್ ಜೋಶಿ ಮತ್ತಿತರರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಮೂರು ದಿನಗಳ ಕಾರ್ಯಕ್ರಮವು ಚುನಾವಣಾ ನಿರ್ವಹಣಾ ಸಂಸ್ಥೆಗಳ ಸಾಮಾನ್ಯ ಮತ್ತು ಪೂರ್ಣಾವಧಿಯ ಗೋಷ್ಠಿಗಳನ್ನು ಒಳಗೊಂಡಿದೆ. ಇದರಲ್ಲಿ ಉದ್ಘಾಟನಾ ಸಮಾರಂಭ, ಇಎಂಬಿ ನಾಯಕರ ಸಮಗ್ರ ಸಭೆ, ಇಎಂಬಿ ಕಾರ್ಯಪಡೆ ಸಭೆಗಳು, ಜಾಗತಿಕ ಚುನಾವಣಾ ಸಮಸ್ಯೆಗಳು, ಮಾದರಿ ಅಂತಾರಾಷ್ಟ್ರೀಯ ಚುನಾವಣಾ ಮಾನದಂಡಗಳು ಮತ್ತು ಚುನಾವಣಾ ಪ್ರಕ್ರಿಯೆಗಳಲ್ಲಿನ ನಾವೀನ್ಯತೆಗಳು ಮತ್ತು ಉತ್ತಮ ಪದ್ಧತಿಗಳ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವ ವಿಷಯಾಧಾರಿತ ಗೋಷ್ಠಿಗಳು ಸೇರಿವೆ. ವಿಶ್ವದ ಅತಿದೊಡ್ಡ ಚುನಾವಣೆಯಾದ ೨೦೨೪ ರ ಲೋಕಸಭಾ ಚುನಾವಣೆಗಳನ್ನು ಪ್ರಮುಖವಾಗಿ ಬಿಂಬಿಸುವ “ಇಂಡಿಯಾ ಡಿಸೈಡ್ಸ್” ಎಂಬ ಸಾಕ್ಷ್ಯಚಿತ್ರ ಸರಣಿಯನ್ನು ಇಂದು ಪ್ರದರ್ಶಿಸಲಾಗುವುದು.

**<><><*><><<>**

ಸ್ವಿಟ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ೨೦೨೬ ರ ವಿಶ್ವ ಆರ್ಥಿಕ ವೇದಿಕೆಯ ಸಂದರ್ಭದಲ್ಲಿ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ವಿಶ್ವ ನಾಯಕರನ್ನು ಭೇಟಿಯಾದರು. ಬೆಲ್ಜಿಯಂನ ಉಪ ಪ್ರಧಾನಮಂತ್ರಿ ಮ್ಯಾಕ್ಸಿಮ್ ಪ್ರೆವೋಸ್ಟ್ ಅವರೊಂದಿಗಿನ ಸಭೆಯಲ್ಲಿ, ಸಂಶೋಧನೆ ಮತ್ತು ಅಭಿವೃದ್ಧಿ, ಕಡಲಾಚೆಯ ಪವನ ಮತ್ತು ಸೌರಶಕ್ತಿಯಲ್ಲಿ ಸಹಕಾರ ಮತ್ತು ಹಸಿರು ವರ್ಗೀಕರಣದಲ್ಲಿ ಭಾರತ-ಬೆಲ್ಜಿಯಂ ಪಾಲುದಾರಿಕೆಯ ಬಲವನ್ನು ಅವರು ಪುನರುಚ್ಚರಿಸಿದರು. ಶುದ್ಧ ಇಂಧನ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಸಹಯೋಗವನ್ನು ಮುಂದುವರಿಸುವ ಕುರಿತು ಕುವೈತ್‌ನ ವಿದ್ಯುತ್, ಜಲ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಸುಬೈಹ್ ಅಬ್ದುಲಜೀಜ್ ಅಬ್ದುಲ್ ಮೊಹ್ಸೆನ್ ಅಲ್-ಮುಖೈಝೀಮ್ ಅವರೊಂದಿಗೆ ಪ್ರಹ್ಲಾದ್ ಜೋಶಿ ಸಂವಾದ ನಡೆಸಿದರು. ಭಾರತದ ಸೌರ ವಿದ್ಯುತ್ ಉತ್ಪಾದನೆ ಮತ್ತು ಸೌರಕೋಶ ಪರಿಸರ ವ್ಯವಸ್ಥೆಯನ್ನು ಅನ್ವೇಷಿಸುವ ಮತ್ತು ಭಾರತದಲ್ಲಿ ಕುವೈತ್‌ನಿಂದ ಹೂಡಿಕೆಯನ್ನು ಪ್ರೋತ್ಸಾಹಿಸುವ ಕುರಿತು ಸಚಿರು ಚರ್ಚಿಸಿದರು.

**<><><*><><<>**

ಕೃತಕ ಬುದ್ಧಿಮತ್ತೆಯ ಭವಿಷ್ಯವು ಅತ್ಯಂತ ದೊಡ್ಡ ವ್ಯವಸ್ಥೆಗಳಿಗಿಂತ ಚಿಕ್ಕದಾದ, ಪರಿಣಾಮಕಾರಿ ಮಾದರಿಗಳಿಂದ ರೂಪುಗೊಳ್ಳುತ್ತದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ

ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಸ್ವಿಟ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯಲ್ಲಿ ಪಾಲ್ಗೊಂಡಿರುವ ಅವರು, ಜಾಗತಿಕವಾಗಿ ಸುಮಾರು ಶೇಕಡಾ ೯೫ ರಷ್ಟು ಕೃತಕ ಬುದ್ಧಿಮತ್ತೆ ಕೆಲಸವು ಪ್ರಸ್ತುತ ಸಣ್ಣ ಮಾದರಿಗಳಿಂದ ನಿರ್ವಹಿಸಲ್ಪಡುತ್ತಿದೆ. ಇದು ಭಾರತದ ಕೈಗೆಟುಕುವ ಮತ್ತು ಅಪ್ಲಿಕೇಶನ್-ಕೇಂದ್ರಿತ ಕೃತಕ ಬುದ್ಧಿಮತ್ತೆ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಕಾರ್ಯತಂತ್ರವನ್ನು ಬೆಂಬಲಿಸುವ ಪ್ರವೃತ್ತಿಯಾಗಿದೆ ಎಂದರು. ಭಾರತದಲ್ಲಿ ನಿರ್ಮಿಸಲಾಗುತ್ತಿರುವ ೫೦ ಶತಕೋಟಿ ಮತ್ತು ೧೨೦ ಶತಕೋಟಿ ನಿಯತಾಂಕಗಳವರೆಗಿನ ೧೨ ಎಐ ಮಾದರಿಗಳು ವಿವಿಧ ವಲಯಗಳ ಉದ್ಯಮಗಳ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ಸಚಿವರು ಹೇಳಿದರು. ಮಾದರಿ ಅಭಿವೃದ್ಧಿ, ಸೆಮಿಕಂಡಕ್ಟರ್ ಉತ್ಪಾದನೆ, ಮೂಲಸೌಕರ್ಯ ಮತ್ತು ಇಂಧನ ಸೇರಿದಂತೆ ಕೃತಕ ಬುದ್ಧಿಮತ್ತೆ ಮೌಲ್ಯ ಸರಪಳಿಯಲ್ಲಿ ಭಾರತದ ಪ್ರಗತಿ ಗಮನಾರ್ಹವಾಗಿದೆ. ದೇಶದ ಸೆಮಿಕಂಡಕ್ಟರ್ ಕಾರ್ಯಕ್ರಮವು ಗಮನಾರ್ಹವಾಗಿ ಮುಂದುವರೆದಿದೆ, ೧೦ ಸ್ಥಾವರಗಳಲ್ಲಿ ನಿರ್ಮಾಣ ಕಾರ್ಯ ನಡೆಯುತ್ತಿದೆ, ಅವುಗಳಲ್ಲಿ ಮೂರು ಈಗಾಗಲೇ ಪೈಲಟ್ ಉತ್ಪಾದನೆಯನ್ನು ಪ್ರಾರಂಭಿಸಿವೆ. ಈ ವರ್ಷ ಇನ್ನೂ ನಾಲ್ಕು ಪ್ರಾಯೋಗಿಕ ಸ್ಥಾವರಗಳು ಮತ್ತು ವಾಣಿಜ್ಯ ಉತ್ಪಾದನೆಗೆ ಪ್ರವೇಶಿಸುವ ನಿರೀಕ್ಷೆಯಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

**<>><><*><><<>**

ಮೀನುಗಾರಿಕೆ ಇಲಾಖೆಯಿಂದ ಮತ್ಸ್ಯೋದ್ಯಮ ವಲಯದ ಕುರಿತ ದುಂಡು ಮೇಜಿನ ಸಭೆ ಇಂದು ನವದೆಹಲಿಯಲ್ಲಿ ನಡೆಯಲಿದೆ. ಲ೩ ಪಾಲುದಾರ ರಾಷ್ಟ್ರಗಳ ರಾಯಭಾರಿಗಳು ಮತ್ತು ಹೈಕಮಿಷನರ್‌ಗಳು ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ವಹಿಸಲಿದ್ದಾರೆ. ದ್ವಿಪಕ್ಷೀಯ ವ್ಯಾಪಾರ, ಸಾಗರ ರಫ್ತು ಉತ್ತೇಜನ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆ ಸಂಪರ್ಕಗಳನ್ನು ಬಲಪಡಿಸುವ ಗುರಿಯನ್ನು ಸಮ್ಮೇಳನ ಹೊಂದಿದೆ. ಏಷ್ಯಾ, ಆಫ್ರಿಕಾ, ಐರೋಪ್ಯ ರಾಷ್ಟ್ರಗಳ, ಉತ್ತರ ಅಮೆರಿಕಾ, ಓಷಿಯಾನಿಯಾ ಮತ್ತು ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ಸೇರಿದಂತೆ ಪಾಲುದಾರ ರಾಷ್ಟ್ರಗಳ ರಾಯಭಾರಿಗಳು ಮತ್ತು ಹೈಕಮಿಷನರ್‌ಗಳ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ. ಸಾಗರ ವಲಯದ ವ್ಯಾಪಾರ, ಮಾರುಕಟ್ಟೆ ಪ್ರವೇಶ, ನಿಯಂತ್ರಕ ಸಹಕಾರ ಮತ್ತು ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಪಾಲುದಾರಿಕೆಗಳನ್ನು ಆಳಗೊಳಿಸಲು ಬೆಳೆಯುತ್ತಿರುವ ಅವಕಾಶಗಳ ಕುರಿತು ರಚನಾತ್ಮಕ ಸಂವಾದವನ್ನು ಸಕ್ರಿಯಗೊಳಿಸಲು ಸಮ್ಮೇಳನವು ಪ್ರಮುಖ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

**<>><><*><><<>**

ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ- Wಇಈ ಯಲ್ಲಿ ಲಕ್ಷಾಂತರ ಮನೆಗಳು ಮತ್ತು ರೈತರಿಗೆ ಕೈಗೆಟುಕುವ ಸೌರಶಕ್ತಿಯನ್ನು ತಲುಪಿಸುವಲ್ಲಿ ಭಾರತದ ಯಶಸ್ಸಿಗೆ ಅಂತಾರಾಷ್ಟ್ರೀಯ

ಸೌರ ಒಕ್ಕೂಟ-IS◌ಂ ಪ್ರಶಂಸೆ ವ್ಯಕ್ತಪಡಿಸಿದೆ. ಈ ಕಾರ್ಯಕ್ರಮದಲ್ಲಿ ಮಾತನಾಡಿದ IS◌ಂ ಮಹಾನಿರ್ದೇಶಕ ಆಶಿಶ್ ಖನ್ನಾ, ೧೦ ದಶಲಕ್ಷ ಮನೆಗಳನ್ನು ತಲುಪುವ ಗುರಿ ಹೊಂದಿರುವ ಭಾರತದ ಸೂರ್ಯ ಘರ್ ಮೇಲ್ಛಾವಣಿ ಸೌರ ಯೋಜನೆ ಮತ್ತು ರೈತರಿಗೆ ಸೌರಶಕ್ತಿ ಚಾಲಿತ ನೀರಾವರಿಯನ್ನು ಉತ್ತೇಜಿಸುವ 'ಪಿಎಂ ಕುಸುಮ್' ಕಾರ್ಯಕ್ರಮವು ವಿದ್ಯುತ್ ಪ್ರಸರಣ ವ್ಯವಸ್ಥೆಯನ್ನು ವಿಸ್ತರಿಸಲು ಮತ್ತು ಕಡಿಮೆ ವೆಚ್ಚದಲ್ಲಿ ಕೃಷಿಯನ್ನು ಉತ್ತೇಜಿಸಲು ಇತರ ದೇಶಗಳು ಅಳವಡಿಸಿಕೊಳ್ಳಬಹುದಾದ ಪ್ರಾಯೋಗಿಕ ಮಾದರಿಗಳನ್ನು ನೀಡುತ್ತದೆ ಎಂದು ಹೇಳಿದರು.

**<><><*><><<>**

ಮುಂಬರುವ ಕೇರಳ ವಿಧಾನಸಭಾ ಚುನಾವಣೆಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರನ್ನು ಚುನಾವಣಾ ಉಸ್ತುವಾರಿಯನ್ನಾಗಿ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಚುನಾವಣಾ ಸಹ-ಪ್ರಭಾರಿಯಾಗಿ ನೇಮಿಸಲಾಗಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಈ ನೇಮಕಾತಿ ಮಾಡಿದ್ದಾರೆ.

**<><><*><><<>**

ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಟೋಲ್ ಪ್ಲಾಜಾಗಳಲ್ಲಿ ಬಳಕೆದಾರರ ಶುಲ್ಕ ಪಾವತಿಯನ್ನು ಬಲಪಡಿಸಲು ಕೇಂದ್ರ ಮೋಟಾರು ವಾಹನ ಎರಡನೇ ತಿದ್ದುಪಡಿ ನಿಯಮಗಳನ್ನು ಸರ್ಕಾರ ಜಾರಿಗೊಳಿಸಿದೆ. ಬಳಕೆದಾರರ ಶುಲ್ಕ ವ್ಯವಸ್ಥೆಯನ್ನು ಸುಧಾರಿಸುವ, ವಿದ್ಯುನ್ಮಾನ ಟೋಲ್ ಸಂಗ್ರಹದ ದಕ್ಷತೆಯನ್ನು ಹೆಚ್ಚಿಸುವ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಳಕೆದಾರರ ಶುಲ್ಕ ವಂಚನೆಯನ್ನು ನಿರುತ್ಸಾಹಗೊಳಿಸುವ ಗುರಿಯನ್ನು ಈ ತಿದ್ದುಪಡಿಗಳು ಹೊಂದಿವೆ. ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿ ಜಾಲದ ಸುಸ್ಥಿರ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಪಾರದರ್ಶಕ ಮತ್ತು ತಂತ್ರಜ್ಞಾನ ಆಧಾರಿತ ಟೋಲಿಂಗ್ ವ್ಯವಸ್ಥೆಗಳನ್ನು ಬೆಳೆಸುವಲ್ಲಿ ಈ ತಿದ್ದುಪಡಿಗಳು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಹಾಯ ಮಾಡುತ್ತವೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ತಿಳಿಸಿದೆ. ನಿಬಂಧನೆಗಳ ಪ್ರಕಾರ, ಪಾವತಿಸಬೇಕಾದ ಬಳಕೆದಾರ ಶುಲ್ಕವನ್ನು ಸಂದಾಯ ಮಾಡುವವರಿಗೆ ಮಾಲೀಕತ್ವದ ವರ್ಗಾವಣೆ ಅಥವಾ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಾಹನದ ವರ್ಗಾವಣೆಗೆ ಪ್ರಮಾಣಪತ್ರವನ್ನು ನೀಡಲಾಗುವುದಿಲ್ಲ. ಇದು ವಾಣಿಜ್ಯ ವಾಹನಗಳಿಗೂ ಅನ್ವಯವಾಗುತ್ತದೆ.

**<><><*><><<>**

ಇಂಡೋನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್‌ನಲ್ಲಿ ಭಾರತದ ಆಟಗಾರರು ಉತ್ತಮ ಶುಭಾರಂಭ ಮಾಡಿದ್ದಾರೆ. ಇಸ್ಟೋರಾ ಸೆನಾಯನ್‌ನಲ್ಲಿ ನಡೆದ ಮಹಿಳಾ ಸಿಂಗಲ್ಸ್ ಪ್ರಧಾನ ಸುತ್ತಿಗೆ ಅನ್ಮೋಲ್ ಖಾರ್ಬ್ ಮತ್ತು ಆಕರ್ಷಿ ಕಶ್ಯಪ್ ಮುಂದಿನ ಹಂತಕ್ಕೆ ಪ್ರವೇಶ ಪಡೆದರು.

**<><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<><><ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**